ದಿನಾಂಕ: 10-10-2025 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲು</u> : <u>ಪ್ರತಿವಾದಿ ಪರ ಶ್ರೀ ಎ.ವಿ.ಕೆ ವಕೀಲರಿಂದ,</u>**

ಪ್ರತಿವಾದಿ ಕ್ರಯದ ಕರಾರು ಪತ್ರ ಬರೆದುಕೊಟ್ಟು ಕ್ರಯ ಪತ್ರ ಬರೆದುಕೊಡುತ್ತೇನೆ ಎಂದು ಹೇಳಿ ಬರೆದು ಕೊಡದ ಕಾರಣ ಈ ದಾವೆಯನ್ನು ಹಾಕಿರುತ್ತೇನೆ. ದಾವಾ ಆಸ್ತಿ ಸರ್ವೆ ನಂಃ 784 ವಿಸ್ತೀರ್ಣ 92 ಸೆಂಟ್ಸ್ ಇರುತ್ತದೆ. ಸದರಿ ಹೊಲದ ಚೆಕ್ ಬಂದಿ ನನಗೆ ಹೇಳಲಾಗುವುದಿಲ್ಲ. ದಾವಾ ಆಸ್ತಿ ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ ಆದರೆ ಈಗ ಪ್ರತಿವಾದಿ/ ಜಗದೀಶ ರವರ ಹೆಸರಿನಲ್ಲಿ ಇರುತ್ತದೆ. ಪ್ರತಿವಾದಿಗೆ ಅವರ ತಾತನಿಂದ ಬಂದಿರುವ ಆಸ್ತಿ ಆಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ ನನಗೆ ಸುಮಾರು 7-8 ವರ್ಷಗಳಿಂದ ಪರಿಚಯವಿರುತ್ತಾರೆ. ಪ್ರತಿವಾದಿ ಹತ್ತಿರ ಎಷ್ಟು ವ್ಯವಹಾರ ಮಾಡಿದ್ದಿರಾ ಎಂದರೆ ಸಾಕ್ಷಿಯು ಯಾವುದೇ ವ್ಯವಹಾರ ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ಯಾರಿಗೂ ಸಹ ದುಡ್ಡು ಕೊಟ್ಟಿರುವುದಿಲ್ಲ ಮತ್ತು ದುಡ್ಡಿನ ವ್ಯವಹಾರ ಮಾಡಿರುವುದಿಲ್ಲ. ನನಗೆ ಮೂರುವರೆ ಎಕರೆ ಜಮೀನು ಇರುತ್ತದೆ.

2019 ರಲ್ಲಿ ನನ್ನ ಮತ್ತು ಪ್ರತಿವಾದಿಯ ನಡುವೆ ವ್ಯವಹಾರ ಆಗಿರುತ್ತದೆ ಆದರೆ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ. ವ್ಯವಹಾರದ ಮಾತುಕತೆ ಸಂಡೂರಿನ ನೊಂದಣಿ ಕಚೇರಿಯಲ್ಲಿ ಆಗಿರುತ್ತದೆ. ನೊಂದಣಿಯಾಗಿದ್ದ ದಿನವೇ ಮಾತುಕತೆಯಾಗಿರುತ್ತದೆ. ಮಾತುಕತೆಯ ಸಮಯದಲ್ಲಿ ಪ್ರತಿವಾದಿ ಹಾಗೂ ಅವರ ಹೆಂಡತಿ ಇದ್ದರು. ಅವರನ್ನು ಬಿಟ್ಟು ಯಾರು ಸಹ ಇರಲಿಲ್ಲ.

ದಾವಾ ಜಮೀನು ರೂ.1,20,000 ಕ್ಕೆ ಮಾರಾಟ ಮಾಡುವ ಮಾತುಕತೆಯಾಗಿತ್ತು, ಅದರಲ್ಲಿ ನಾನು ರೂ.1,00,000 ಕೊಟ್ಟಿರುತ್ತೇನೆ, ಬಾಕಿ ರೂ.20,000 ಕೊಡುವುದು ಇರುತ್ತದೆ. ಅವು ಎಷ್ಟು ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲಾಗುವುದಿಲ್ಲ. ರೂ.1,00,000 ಕೊಟ್ಟ ಬಗ್ಗೆ ಪ್ರತಿವಾದಿಯಿಂದ ಯಾವುದೇ ರಶೀದಿಯನ್ನು ಪಡೆದಿರುವುದಿಲ್ಲ. ಹಣವನ್ನು ಕೊಟ್ಟಾಗ ಸಮಯ ಸುಮಾರು ಮದ್ಯಾಹ್ನಃ 12.00 ಗಂಟೆಯಾಗಿರಬಹುದು. ಹಣ ಕೊಡುವ ಸಮಯದಲ್ಲಿ ನಾನು, ಪ್ರತಿವಾದಿ ಮತ್ತು ಅವರ ಹೆಂಡತಿ ಇದ್ದರು. ನಾನು ಹಣ ಕೊಟ್ಟ ನಂತರ ಪ್ರತಿವಾದಿ ಮತ್ತು ಅವರ ಹೆಂಡತಿ ನೊಂದಣಿ ಕಚೇರಿಗೆ ಬಂದು ಸಹಿ ಮಾಡಿ

ದಾಖಲೆ ಬರೆದುಕೊಟ್ಟಿರುತ್ತಾರೆ. ಸಹಿ ಮಾಡುವಾಗ ಪ್ರತಿವಾದಿ ಮತ್ತು ಅವರ ಹೆಂಡತಿ ಬಿಟ್ಟು ಬೇರೆ ಯಾರು ಇರಲಿಲ್ಲ. ಸದರಿ ದಾಖಲೆಗೆ ಪ್ರತಿವಾದಿ ಮತ್ತು ಅವರ ಹೆಂಡತಿ ಮಾತ್ರ ಸಹಿ ಮಾಡಿರುತ್ತಾರೆ. ಸದರಿ ದಾಖಲೆ ನೊಂದಣಿ ಮಾಡಿಸುವಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ಅದರಲ್ಲಿ 92 ಸೆಂಟ್ಸ್ ಮಾರಾಟ ಮಾಡಿರುವ ಬಗ್ಗೆ ಬರೆದಿರುತ್ತಾರೆ. ಅಷ್ಟನ್ನು ಬಿಟ್ಟು ಬೇರೆ ಏನನ್ನು ಬರೆದಿರುವುದಿಲ್ಲ.

ಸದರಿ ಪತ್ರವನ್ನು ಸುಬಾನ್ ಎನ್ನುವವರು ಬರೆದಿರುತ್ತಾರೆ. ಪ್ರತಿವಾದಿ ಮತ್ತು ಅವರ ಹೆಂಡತಿ ಹೇಳಿದ ಹಾಗೇ ಸುಬಾನ್ ಸಾಬ ರವರ ಬರೆದಿರುತ್ತಾರೆ. ನನಗೆ ಓದು ಬರಹ ಬರುವುದಿಲ್ಲ. ನಿಪಿ 1 ಸುಬಾನ್ ಸಾಬ ರವರು ಬರೆದಿರುತ್ತಾರೆ. ನಿಪಿ 1 ಸುಬಾನ್ ಸಾಬ ರವರ ಬರವಣಿಗೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗೆ ರೂ.1,00,000 ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರ ಎಷ್ಟು ರೂಪಾಯಿ ಬಾಂಡ್ ಪೇಪರ್ ಮೇಲೆ ಬರೆಯಲಾಗಿತ್ತು ಎಂದು ನನಗೆ ನೆನಪಿಲ್ಲ. ಸದರಿ ಬಾಂಡ್ ಪೇಪರ್ ಯಾರು ತಂದಿರುತ್ತಾರೆ ಮತ್ತು ಯಾರ ಹೆಸರಿನಲ್ಲಿ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡ್ ಪೇಪರ್ ಮುಂಚಿತವಾಗಿ ತಂದಿದ್ದರು ಅಥವಾ ಆಮೇಲೆ ತಂದಿರುತ್ತಾರೆ ಎಂದು ನನಗೆ ನೆನಪಿಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಷಯದ ಬಗ್ಗೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನಾನು ಪ್ರತಿವಾದಿಗೆ ಸಾಕಷ್ಟು ಬಾರಿ ಕ್ರಯ ಪತ್ರ ಬರೆದುಕೊಡಲು ಕೇಳಿದ್ದು, ಯಾವಾಗ ಕೇಳಿರುತ್ತೇನೆ ಎಂದು ನನಗೆ ನೆನಪಿಲ್ಲ. ಅದರ ದಿನಾಂಕ, ತಿಂಗಳು ಮತ್ತು ವರ್ಷ ಸಹ ನನಗೆ ಗೊತ್ತಿಲ್ಲ. ನಾನು ಅವರನ್ನು ಕೇಳಿದ ನಂತರ ಅವರು ಕ್ರಯ ಪತ್ರ ಬರೆದುಕೊಡದೆ ಕಾರಣ ನಾನು ಮುಂದೆ ಏನೂ ಮಾಡಿರುವುದಿಲ್ಲ. ಈ ದಾವೆ ಹಾಕುವ ಮುಂಚೆ ನಾನು ಪ್ರತಿವಾದಿಗೆ ನೋಟಿಸ್ ಕಳುಹಿಸಿರುತ್ತೇನೆ. ಆದರೆ ದಿನಾಂಕ ನೆನಪಿಲ್ಲ. ನಿಪಿ 1 ಬರೆದುಕೊಟ್ಟ 3 ವರ್ಷದ ಒಳಗೆ ನಾನು ಅವರಿಗೆ ನೋಟಿಸ್‌ನ್ನು ಕೊಟಿಟರುತ್ತೇನೆ. ಸದರಿ ನೋಟಿಸ್ ಪ್ರತಿವಾದಿಗೆ ತಲುಪಿರುತ್ತದೆ ಇಲ್ಲವೊ ನನಗೆ ಗೊತ್ತಿಲ್ಲ.

ನಿಪಿ 1 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಪಹಣಿ

ಹಾಜರುಪಡಿಸಿರುತ್ತೇನೊ ಇಲ್ಲವೊ ಎಂದು ನೆನಪಿಲ್ಲ. ಪ್ರತಿವಾದಿ ನನ್ನಿಂದ ರೂ.1,00,000 ಪಡೆದು ನಿಪಿ 1 ನ್ನು ಬರೆದುಕೊಟ್ಟಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಈ ಹಿಂದೆ ಸುಮಾರು ಬಾರಿ ದುಡ್ಡು ಪಡೆದು ಅವರು ಭದ್ರತೆಗಾಗಿ ಕಾಗದ ಪತ್ರ ಬರೆದುಕೊಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಸಾಲ ಪಡೆದು ಸಾಲಗೊಸ್ಕರ ದಾಖಲಾತಿ ಬರೆದುಕೊಡುತ್ತಿದ್ದರು ಎಂದರೆ ಸರಿಯಲ್ಲ.

ದಿಃ 08.08.2016 ರಂದು ಆಸ್ತಿಯನ್ನು ರೂ.6,00,000 ಕ್ಕೆ ಮಾರಾಟ ಮಾಡಿ ಅದರಲ್ಲಿ ರೂ.5,00,000 ವನ್ನು ಪ್ರತಿವಾದಿಗೆ ಕೊಟ್ಟು ದಾಖಲೆ ಬರೆಸಿಕೊಂಡಿರುತ್ತೇನೆ ಎಂದರೆ ಸರಿ. ನಂತರ ಸದರಿ ದುಡ್ಡನ್ನು ಪ್ರತಿವಾದಿ ವಾಪಸ್ಸು ಮಾಡಿದ್ದರಿಂದ ಸದರಿ ದಾಖಲೆ ರದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಂತರ ಮಾರಾಟ ಮಾಡುವ ಸಮಯದಲ್ಲಿ ನಿನಗೆ ಹೇಳಿ ಮಾರಾಟ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ಸದರಿ ಪತ್ರದನ್ವಯ ಅಸಲು ಹಣ ಮತ್ತು ಬಡ್ಡಿ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿ.

ಅದೇ ರೀತಿಯಾಗಿ ದಿಃ 21.03.2018 ರಂದು ಒಂದು ಕಾಗದ ಪತ್ರವನ್ನು ರೂ.6,00,000 ಕ್ಕೆ ಬರೆಸಿಕೊಂಡು, ರೂ.5,00,000 ವನ್ನು ಪ್ರತಿವಾದಿಗೆ ಕೊಟ್ಟು ದಾಖಲೆ ಬರೆಸಿಕೊಂಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಪ್ರತಿವಾದಿ ಸದರಿ ಪತ್ರದನ್ವಯ ಅಸಲು ಹಣ ಮತ್ತು ಬಡ್ಡಿ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿಯಾಗಿ ನಿಪಿ 1 ನ್ನು ಭದ್ರತೆಗಾಗಿ ಪಡೆದು ಪ್ರತಿವಾದಿಗೆ ಸಾಲ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ, ನಿಪಿ 1 ನ್ನು ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡೆಸಿ ಪ್ರತಿವಾದಿಯ ವಿರುದ್ದ ಮೂಲ ದಾವಾ ನಂಃ 175/2021 ನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿದ್ದರಿಂದ ಪ್ರತಿವಾದಿಯನ್ನು ಹೊರುತಪಡೆಸಿ ಅವರ ಮಕ್ಕಳಿಗೆ ಸಹ ಅದರಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. 2021 ರಲ್ಲಿ ದಾವಾ ಆಸ್ತಿಯ ಮೌಲ್ಯ ಸುಮಾರು 15 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ.

ಪ್ರತಿವಾದಿ ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಭದ್ರತೆಗಾಗಿ ನಿಪಿ 1 ನ್ನು ಬರೆದುಕೊಟ್ಟಿರುತ್ತಾರೆ, ನಾನು ಪ್ರತಿವಾದಿಯ ಆಸ್ತಿಯನ್ನು ಕಬಳಿಸಿಕೊಳ್ಳುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಕಿರುವ ಪ್ರಮಾಣ ಪತ್ರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.